೨) ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಪಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿರುವುದು

ಶ್ರೀಮತಿ ಮನೋರಮಾ ಮಾಧ್ವರಾಜ್.—ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಸರಕಾರಿ ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ಏಳು ತರಗತಿಗಳ ಶಾಲೆಗಳಲ್ಲಿ ಇಬ್ಬರೇ ಉಪಾಧ್ಯಾಯರುಗಳಿದ್ದು ಪಾಠ ಪ್ರವಚನಗಳು ನಡೆಯದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಸರಕಾರವು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವುದು ಕಡ್ಡಾಯವಾಗಿರುವುದರಿಂದ ಸರಕಾರ ಇದುವರೆಗೆ ಸದರಿ ಶಾಲೆಗಳಿಗೆ ಮಾಡುತ್ತಿರುವ ವೆಚ್ಚ ಉಪಯೋಗವಿಲ್ಲದಂತಾಗುತ್ತದೆ. ಇದೇ ರೀತಿ ಇಡೀ ಜಿಲ್ಲೆಯಲ್ಲಿ ಸುಮಾರು ೭೫೦ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಸದರಿ ಹುದ್ದೆಗಳನ್ನು ತುಂಬದಿದ್ದಲ್ಲಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುವುದರಿಂದ ಕೂಡಲೇ ಸದರಿ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ಕೈಕೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೊ ಮಶೇಖರ್.—ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರೀ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರ ತೀವ್ರ ಕೊರತೆಯನ್ನು ನಿವಾರಿಸಲು ತಕ್ಷಣವೇ ಸಾಧ್ಯವಾದಲ್ಲಿ ನಿಯೋಜನೆ ಮೇರೆಗೆ ಭರ್ತಿ ಮಾಡಲು ಇಲಾಖೆಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಖಾಲೀ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

೩) ಶಿವಮೊಗ್ಗ ಜಿಲ್ಲೆಯಲ್ಲಿರುವ ವಾರಾಹಿ ಜಲ ವಿದ್ಯುತ್ ಯೋಜನೆಯಲ್ಲಿ ಭೂ ಮುಳುಗಡೆಯಾವ ರೈತರಿಗೆ ಪುನರ್ವಸತಿ ಕಾರ್ಯದಲ್ಲಿ ವಂಚನೆಯಾಗಿರುವುದು

ಶ್ರೀ ಬಿ. ಸ್ವಾಮಿರಾವ್ —ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿರುವ ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆಯಾಗುವ ರೈತ ಬಡ ಕುಟುಂಬದವರಿಗೆ ಪರಿಹಾರ ಪುನರ್‌ವಸತಿ ಕಾರ್ಯ ನಿರ್ವಹಿಸುವಲ್ಲಿ ರೈತರಿಗೆ ಮತ್ತು ಸರಕಾರಕ್ಕೆ ಭಾರಿ ವಂಚನೆ ಮಾಡಿರುವ ಪ್ರಕರಣಗಳು ನಡೆದರೂ ಸರಕಾರ ಕಣ್ಣುಮುಚ್ಚಿ ಕೂತಿದೆ. ರೈತರು, ಜಮೀನು ಮನೆ ಕಟ್ಟಡ ಅಲ್ಲದೆ ಅವರೇ ಬೆಳೆಸಿದ, ಫಲವೃಕ್ಷಗಳಿಗೆ ಪರಿಹಾರವನ್ನು ನೀಡುವಲ್ಲಿ ತಾರತಮ್ಯವೆಸಗಿ ಬಹಳ ಕಾಲದಿಂದ ವಾಸಿಸುತ್ತಿದ್ದ ಗಟ್ಟಿವಂಟ್ಟಾದ ಮನೆಗಳಿಗೆ ಕಡಿಮೆ ಪರಿಹಾರವನ್ನು. ಪರಿಹಾರಕ್ಕೊಸ್ಕರ ಇತ್ತೀಚೆಗೆ ಕಟ್ಟಿರುವ ಮನೆಗಳಿಗೆ ಹೆಚ್ಚು ಪರಿಹಾರವನ್ನು ನಿಗದಿ ಮಾಡಿರುತ್ತಾರೆ ಅಲ್ಲದೆ ಮುಳುಗಿರುವ ಹಾಗೂ ಮುಳುಗುತ್ತಿರುವ ಮನೆಗಳಿಗೆ ಪರಿಹಾರ ಮೊದಲು ಕೊಡದೇ ಮುಳುಗಡೆಯಾಗದ ಯೋಜನಾ ಪ್ರದೇಶದಿಂದ ದೂರದ ಊರುಗಳಲ್ಲಿರುವ ಶ್ರೀಮಂತ ವರ್ಗದವರಿಗೆ ಪರಿಹಾರ ಕೊಡುವಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ ಪ್ರತಿ ವರ್ಷದಂತೆ ಪ್ರವಾಹ ಬಂದಾಗ ಸದರಿ ರೈತರ ರಕ್ಷಣೆಗಾಗಿ ಮಾಡಿದ ತಾತ್ಕಾಲಿಕ ಒಂದೊಂದು ಶೆಡ್ಡಿಗೆ ೩೫ ಸಾವಿರ ರೂಪಾಯಿಗಳಂತೆ ಸುಮಾರು ೫೦ ಶೆಡ್ಡುಗಳನ್ನು ನಿರ್ಮಿಸಿ ಲಕ್ಷಾಂತರ ರೂಪಾಯಿಗಳ ವಂಚನೆಯಾಗಿರುತ್ತದೆ. ಮೇಲ್ಕಂಡ ರೈತರಿಗೆ ಪುನರ್‌ವಸತಿ ಒದಗಿಸುವಲ್ಲಿಯೂ ಸಹ ಭಾರಿ ಪ್ರಮಾಣದ ಹಣ ದುರುಪಯೋಗವಾಗಿರುತ್ತದೆ. ಇದನ್ನು ತಡೆಗಟ್ಟಲು ರೈತ ಹೋರಾಟ ಸಮಿತಿಯವರು ಹಾಗೂ ನಾವುಗಳು ಹೈಪವರ್ ಕಮಿಟಿ ನೇಮಿಸುವಂತೆ ಒತ್ತಾಯಿಸಿದಾಗ ಸಮಿತಿಯನ್ನು ರಚಿಸಲಾಯಿತು. ಈ ಭಾರೀ ಅವ್ಯವಹಾರಗಳನ್ನು ಬಯಲಿಗೆಳೆದು ಮುಳುಗಡೆ ರೈತರಿಗೆ ನ್ಯಾಯ ಒದಗಿಸಲು ಹೈಪವರ್ ಕಮಿಟಿ ತೀರ್ಮಾನಿಸಿ ರೈತರಿಗೆ ನ್ಯಾಯ ದೊರಕಿಸಿಕೊಡುವ ಮೂಲಕ ಅವ್ಯವಹಾರ, ಭ್ರಷ್ಟಾಚಾರಗಳನ್ನು ಸಿ.ಓ.ಡಿ. ತನಿಖೆಗೆ ಒಳಪಡಿಸಬೇಕೆಂದು ಆಗ್ರಹಪಡಿಸಿ ಸರಕಾರದ ಗಮನವನ್ನು ಸೆಳೆದ ಬಗ್ಗೆ ೧೨-೮-೮೫ ರಂದು ಸಿ.ಓ.ಡಿ.ಗೆ ಒಪ್ಪಿಸಿದ್ದಾಗ್ಯೂ ಈವರೆಗೆ ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ರೀತಿ ವಿಳಂಬವಾದಲ್ಲಿ ಮುಳುಗಡೆಯಾದ ಮನೆಗಳನ್ನು ಬಿಟ್ಟು ತೀರ್ಥಹಳ್ಳಿ, ಯಡೂರು, ಮೇಗರವಳ್ಳಿ ಮತ್ತು ಹೊಸನಗರಗಳಲ್ಲಿ ಕಟ್ಟಿಸಿಕೊಂಡಿರುವ ಮನೆ ಮತ್ತು ಬಂಗಲೆಗಳವರು ಭಾರೀ ಮೊತ್ತದ ಪರಿಹಾರವನ್ನು ಪಡೆಯುವ ಸಾಧ್ಯತೆ ಇದೆ. ಈವರೆಗೆ ಎಂಟು ಬಾರಿ ಸದನದ ಮುಂದೆ ಈ ವಿಷಯವನ್ನು ತಂದಾಗ್ಯೂ ಯಾವ ಪ್ರಯೋಜನವೂ ಆಗಿಲ್ಲ. ೮-೪-೮೭ರ ಉದಯವಾಣಿ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಭೂಸ್ವಾಧೀನ, ಕಾಯಿದೆಯ ೬ರ ಅನ್ವಯ ಹೊಸನಗರ ತಾಲ್ಲೂಕಿನ ನಗರ ಹೋಬಳಿ ಯಡೂರು ಗ್ರಾಮದಲ್ಲಿನ ಸರ್ವೆ ನಂ. ೧೪೨ರಲ್ಲಿ ವೈ.ವಿ. ಭಾಸ್ಕರ ಜೋಯಿಸ್

ಎಂಬುವರು ಮನೆ ಕಟ್ಟಿಕೊಂಡಿದ್ದೂ ಈ ಸರ್ವೆ ನಂ. ಜಮೀನು ಮುಳುಗಡೆ ಪ್ರದೇಶದಿಂದ ಬಹಳ ದೂರವಿದ್ದು, ಇದು ಮನೆಯನ್ನೂ ಉಳಿಸಿಕೊಂಡು ಪರಿಹಾರ ಪಡೆಯುವ ಕ್ರಮವಾಗಿದೆ, ಈ ಮೋಸದ ಸಂಚಿನಲ್ಲಿ ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿಯವರೊಬ್ಬರು ಪರೋಕ್ಷವಾಗಿ ಪಾಲುಗಾರರಾಗಿದ್ದಾರೆಂದು ಹೇಳಿದಲ್ಲಿ ತಪ್ಪಿಲ್ಲ. ಕಾರಣ ಈ ಬಗ್ಗೆ ನಾಲ್ಕು ತಿಂಗಳುಗಳ ಹಿಂದೆ ನಾನು ಒಂದು ಪತ್ರ ಬರೆದು ಉತ್ತರ ಕೋರಿದ್ದಾಗ್ಯೂ ಈವರೆಗೂ ಉತ್ತರ ಬಂದಿರುವುದಿಲ್ಲ. ೧೨.೮.೬೫ರಂದು ಸಿ.ಓ.ಡಿ. ತನಿಖೆಗೆ ಒಪ್ಪಿಸಿರುವ ವಿಷಯದೊಡನೆ ಈ ವಿಷಯವನ್ನೂ ಸೇರಿಸಿ ಪೂರ್ಣ ತನಿಖೆ ನಡೆಸಿ ಭ್ರಷ್ಟಾಚಾರ ತಡೆಗಟ್ಟುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ. ಆದುದರಿಂದ ಈ ವಿಷಯದ ಬಗ್ಗೆ ವಿವರವಾದ ಉತ್ತರವನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

(ಗೊಂದಲ)

ಚೇರ್ಮನ್.—ಕಂದಾಯ ಮಂತ್ರಿಗಳು ಇಲ್ಲ.....

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ,.....

ಚೇರ್ಮನ್.—ಮಾನ್ಯ ರಘುಪತಿಯವರು ಹೇಳುತ್ತಿದ್ದಾರೆ. ತಾವು ದಯವಾಡಿ ಕುಳಿತು ಕೊಳ್ಳಿ.

(ಗೊಂದಲ)

ಶ್ರೀ ಬಿ.ಎ. ಜೀವಿಜಯ.—ಸುಮ್ಮನೆ ಕುಳಿತುಕೊಳ್ಳಿ, ಏಕೆ ಬಾಯಿಗೆ ಬಂದಹಾಗೆ ಮಾತನಾಡುತ್ತೀರಿ.....

ಶ್ರೀ ಆರ್.ಎನ್. ನಾಯಕ್.—ನಾವೇನೂ ಹುಚ್ಚರಲ್ಲ, ಯೋಗ್ಯತೆ ಇದ್ದರೆ ಉತ್ತರ ಕೊಡಬೇಕು. ಇಲ್ಲದೇ ಹೋದರೆ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕು.....

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಅಲ್ಲಿರತಕ್ಕವರೆಲ್ಲರೂ ಹಿರಿಯ ಸದಸ್ಯರು, ಅವರಿಗೂ ಗೊತ್ತಿದೆ. ಹಿಂಬಿರ ನಿಯಮದಲ್ಲಿ ನಿನ್ನೆ ಸುಮಾರು ೨೦ ಪ್ರಶ್ನೆಗಳು ಇದ್ದವು. ಅವುಗಳಲ್ಲಿ ಹೆಚ್ಚು ಕಡಿಮೆ ೧೬ ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ. ಇನ್ನು ಕೇವಲ ೪–೫ಕ್ಕೆ ಮಾತ್ರ ಉತ್ತರ ಬಂದಿಲ್ಲ. ಇವತ್ತು ಕೂಡ ಹಲವಾರು ಪ್ರಶ್ನೆಗಳಿಗೆ ಉತ್ತರ ಬಂದಿದೆ. ಒಂದೆರಡಕ್ಕೆ ಬಂದಿಲ್ಲದೇ ಇರಬಹುದು. ಸದಸ್ಯರೂ ಕೂಡ ಸಹಕರಿಸಬೇಕು, ಉತ್ತರಗಳನ್ನು ಒದಗಿಸಿಕೊಡಲಾಗುವುದು.

ಚೇರ್ಮನ್.—ಕಂದಾಯ ಮಂತ್ರಿಗಳು ಬಂದ ತಕ್ಷಣ ಇವರ ಬಗ್ಗೆ ಉತ್ತರ ತರಿಸಿಕೊಡಲಾಗುವುದು.

ಶ್ರೀ ಆರ್.ಎನ್. ನಾಯಕ್.—ಇದೇ ಪ್ರಶ್ನೆಯನ್ನು ಇಲ್ಲಿಗೆ ೯ ಸಲ ಕೊಟ್ಟಿದ್ದಾರೆ. ಉತ್ತರ ಮಾತ್ರ ಬಂದಿಲ್ಲ, ಈ ಬಗ್ಗೆ ಮಾನ್ಯ ಜೀವಿಜಯರವರು ಉತ್ತರ ಕೊಡಲಿ.....

(ಗೊಂದಲ)

ಶ್ರೀ ಎಂ. ರಘುಪತಿ.—ಉತ್ತರವನ್ನು ತರಿಸಿಕೊಡುತ್ತೇನೆ.

ಚೇರ್ಮನ್.—ಕಂದಾಯ ಮಂತ್ರಿಗಳು ಬಂದ ತಕ್ಷಣ ಉತ್ತರ ತರಿಸಿಕೊಡಲಾಗುವುದು.

ಶ್ರೀ ಆರ್.ಎನ್. ನಾಯಕ್.—ಎಲ್ಲಾ ಸಾರಿ ಇದೇ ಉತ್ತರವನ್ನು ಕೊಟ್ಟಿದ್ದಾರೆ.....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಈ ಷಿಷಿಳಿಕ್ಕೆ ಮೊದಲಿದ್ದ ಇಂಪಾರ್ಟೆನ್ಸ್ ಹೊರಟುಹೋಗಿದೆ. ನಾವು ಷಿಷಿಳಿರ ನಿಯಮದ ಪ್ರಕಾರ ಪ್ರಶ್ನೆ ಕೊಡುತ್ತೇವೆ. ಮಂತ್ರಿಗಳಿಗೆ ಏನೋ ಕೆಲಸ ಇರುತ್ತದೆ. ಅವರು ಬೇರೆ ಕಡೆ ಹೋಗಬೇಕಾಗಿದ್ದರೆ, ಸಂಬಂಧಪಟ್ಟ ಪ್ರಶ್ನೆಗಳಿಗೆ ಉತ್ತರವನ್ನು ಇಲ್ಲಿ ಇರುವವರ ಕಡೆ ಕೊಟ್ಟು ಹೋದರೆ ಯಾರಾದರೂ ಅದನ್ನು ಓದಿ ಹೇಳಬಹುದು. ಈ ನಿಯಮದ ಪ್ರಶ್ನೆಗಳಿಗೆ ಸಪ್ಲಿಮೆಂಟರಿ ಕೇಳುವ ಹಾಗೇನೂ ಇಲ್ಲ. ಆದ್ದರಿಂದ ಇವುಗಳ ಬಗ್ಗೆ ಉತ್ತರ ಕೊಟ್ಟು ಹೋದರೆ ಮರ್ಯಾದೆ ಇರುತ್ತದೆ. ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳು ಇರುತ್ತಾರೆ, ಬೇಕಾದ ಸಿಬ್ಬಂದಿ ವರ್ಗ ಇರುತ್ತದೆ. ಏಕೆ ಉತ್ತರ ಕೊಡುವುದಕ್ಕೆ ಬೇಜವಾಬ್ದಾರಿ ? ಇದರ ಬಗ್ಗೆ ಒಂದು ಪ್ರೆಸಿಡೆಂಡ್ ಮಾಡಲಿ,

ಛೇರ್ಮನ್.—ಮಾನ್ಯ ವೆಂಕಟರಾಮಯ್ಯನವರೇ, ಮಾನ್ಯ ರಘುಪತಿಯವರು ಅದಕ್ಕೆ ಸರಿಯಾಗಿ ಉತ್ತರ ಹೇಳಿದ್ದಾರೆ. ಈಗಾಗಲೇ ಎಷ್ಟೋ ಉತ್ತರಗಳನ್ನು ಕೊಟ್ಟಿದ್ದಾರೆ. ಕೆಲವಕ್ಕೆ ಮಾತ್ರ ಉತ್ತರ ಬಂದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಇದಕ್ಕೆ ಆನ್ಸರ್ ಕೊಡುತ್ತೀರಾ ?

ಶ್ರೀ ಬಿ. ಸ್ವಾಮಿರಾವ್.—ಉತ್ತರ ಕೊಡುವುದಕ್ಕೆ ಆಗದೇ ತಲೆ ತಪ್ಪಿಸಿಕೊಂಡು ಹೋಗುವುದಕ್ಕೆ ಈ ವ್ಯವಸ್ಥೆ ಇದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಛೇರ್ಮನ್.—ಉತ್ತರ ತರಿಸಿಕೊಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ನೇ ಸಲ ಪ್ರಸ್ತಾಪ ಮಾಡಿದರೂ ಸಹ ಉತ್ತರ ಸರಿಯಾಗಿ ಬರುತ್ತಿಲ್ಲ ಎಂದರೆ ಇದೇನು ?

ಶ್ರೀ ಬಿ. ಎ. ಉಮಾರಬ್ಬ.—ಮಾನ್ಯ ರಘುಪತಿಯವರು ಬಂದರಿನ ಮಂತ್ರಿ ಯಾಗಿದ್ದಾರೆ ಅವರಿಗೆ ಇದನ್ನೆಲ್ಲಾ ಹೊರಿಸಿ ಹಡಗಿನ ಮಂತ್ರಿ ಮಾಡುತ್ತಿದ್ದೀರಿ ಅಷ್ಟೇ.

ಛೇರ್ಮನ್.—ಉತ್ತರ ತರಿಸಿಕೊಡುತ್ತಾರೆ. ಈಗ ನಾನು ಮಾನ್ಯ ನೀಲಕಂಠಪ್ಪನವರನ್ನು ಕರೆದಿರುತ್ತೇನೆ. ಅವರು ಓದಬೇಕು.

೪) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಅಮೃತಾಪುರ ಹೋಬಳಿ ನೇರಲಕೆರೆ ಗ್ರಾಮಕ್ಕೆ ಪಶುವೈದ್ಯಶಾಲೆಯನ್ನು ಮಂಜೂರು ಮಾಡುವುದು

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ತರೀಕೆರೆ ತಾಲ್ಲೂಕಿನಲ್ಲಿ ನಡೆದಿರುವ ಒಂದು ಸತ್ಯ ನಿತ್ಯ ಕತೆಯನ್ನು ಹೇಳಬೇಕಾಗಿದೆ. ಈ ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ, ತರೀಕೆರೆ ತಾಲ್ಲೂಕಿನಲ್ಲಿ, ಅಮೃತಾಪುರ ಹೋಬಳಿಯಲ್ಲಿ ನೇರಲಕೆರೆ ಎಂಬ ಗ್ರಾಮವಿದೆ. ಈಗ ಗ್ರಾಮಕ್ಕೆ ೧೯೮೨-೮೩ನೇ ಸಾಲಿನಲ್ಲಿ ಆಗಿನ ಕರ್ನಾಟಕ ಸರ್ಕಾರದವರು, ಅಂದರೆ ಗುಂಡೂರಾವ್ ಸರ್ಕಾರದವರು ಅಪ್ಪಿತಪ್ಪಿ ಒಂದು ಪಶುವೈದ್ಯ ಶಾಲೆಯನ್ನು ಮಂಜೂರು ಮಾಡಿದರು. ಅದನ್ನು ನಂಬಿಕೊಂಡು ಈ ಗ್ರಾಮದ ಮುಗ್ಧ ಜನಗಳು ಶ್ರಮಜೀವಿಯಾದ ಒಬ್ಬ ದಾನಿಯನ್ನು ಹಿಡಿದಿಗೆ ಆಸ್ಪತ್ರೆ ಕಟ್ಟಿಡವನ್ನು ಭವ್ಯವಾಗಿ ಕಟ್ಟಿದರು. ಈ ಕಟ್ಟಡ ಕಟ್ಟಿದ ನಂತರ ಇದರ ಉದ್ಘಾಟನೆ ಈಗಿನ ಮತ್ತು ಆಗಿನ ಅದೇ ಖಾತೆಯಲ್ಲಿರುವ ಸಚಿವರಾದಂಥ ಸಿದ್ಧರಾಮಯ್ಯನವರನ್ನು ಹಿಡಿದು ಕೊಂಡು, ಆ ಗ್ರಾಮದ ಜನರು ಇವರನ್ನು ಒಪ್ಪಿಸಿಕೊಂಡು ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಕೊಂಡು ಹೋದರು. ಈ ಖಾತೆಯ ಆಗಿನ ಮತ್ತು ಈಗಿನ ಸಚಿವರು ಒಬ್ಬರೇ ಆಗಿದ್ದಾರೆ ಇವರು ಉದ್ಘಾಟನೆಗೆ ಹೋಗುವಾಗ ಸರಕಾರದ ಅಧಿಕಾರಿಗಳು ಇದರ ಮಂಜೂರಾತಿಯನ್ನು ವಾಪಸ್ ತೆಗೆದುಕೊಂಡರು. ಇದರ ಕಥೆ ವಿಚಿತ್ರವಾಗಿದೆ, ಪದೇ ಪದೇ ಇದೇ ಕಥೆಯನ್ನು ಹೇಳುತ್ತಿದ್ದೇನೆ ಕೇಳಿ. ಮಂಜೂರಾತಿಯಾದ ಆಸ್ಪತ್ರೆಯನ್ನು ಪುನಃ ವಾಪಸ್ ತೆಗೆದು ಕೊಂಡಿದ್ದಾರೆ. ಆದರೆ ಕಟ್ಟಡ ಆಗಿದೆ. ಈ ಕಟ್ಟಡದ ಉದ್ಘಾಟನೆ ಸಮಾರಂಭಕ್ಕೆ ಮಾನ್ಯ ಸಚಿವರಾದ ಸಿದ್ಧರಾಮಯ್ಯನವರನ್ನು ಕರೆದುಕೊಂಡು ಹೋದರು. ಸರ್ವಸಿದ್ಧತೆಯನ್ನೂ ಮಾಡಿಕೊಂಡಿದ್ದರು, ಅಂದರೆ ಆಸ್ಪತ್ರೆಗೆ ಹೆಸರು, ಕಲ್ಲಿನಲ್ಲಿ ಪ್ರಾರಂಭ ಉದ್ಘಾಟನೆಯ ಹೆಸರು ಮತ್ತು ಸಚಿವರಾದ ಸಿದ್ಧರಾಮಯ್ಯನವರ ಹೆಸರು ನನ್ನ ಹೆಸರು ಎಲ್ಲಾ ಇದೆ. ಸರಕಾರಿ ಪಶುವೈದ್ಯಶಾಲೆ ಎಂದು ನಾಮಕರಣ ಆಗಿದೆ. ಉದ್ಘಾಟನೆ ಆಗದಿದ್ದರೂ ಕಲ್ಲೂ ಇದೆ. ಇದನ್ನು ಉದ್ಘಾಟನೆ ಮಾಡುವುದಕ್ಕೆ ಮಾನ್ಯ ಸಚಿವರು ಬಂದರು.